ಶ್ರೀ ಡಿ. ಎಂ. ಗೋವಿಂದರಾಜು ಅವರು.—ಯಾವ ಏಜಂಟರನ್ನೂ ನೇಮಕಮಾಡಿಲ್ಲ ವೆಂದು ಹೇಳಲಾಗಿದೆ. ಹಾಗಾದರೆ ಆ ಮಠದ ಆಡಳಿತವನ್ನು ನೋಡಿಕೊಳ್ಳುವವರು ಯಾರು ?

ಶ್ರೀ ಕಡಿದಾಳ್ ಮಂಜಪ್ಪನವರು.—ಸ್ವಾಮಿಗಳು.

ಶ್ರೀ ಡಿ. ಎಂ. ಗೋವಿಂದರಾಜು ಅವರು.—ಅವರು ಎಲ್ಲಿ ವಾಸವಾಗಿರುವುದು ?

ಶ್ರೀ ಕಡಿದಾಳ್ ಮಂಜಪ್ಪನವರು.—ಮಠದಲ್ಲಿ.

ಶ್ರೀ ಡಿ. ಎಂ. ಗೋವಿಂದರಾಜು ಅವರು.—ಅವರು ಮಠದಲ್ಲಿ ವಾಸಮಾಡುತ್ತಿಲ್ಲ, ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ಡಿ. ಎಂ. ಗೋವಿಂದರಾಜು ಅವರು.—ಒಂದು ವೇಳೆ ಅವರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆಂದು ತಮ್ಮ ಗಮನಕ್ಕೆ ಬಂದರೆ, ಅವರನ್ನು ವಜಾಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ನಕಾರಣವಾಗಿದ್ದರೆ ವಜಾಮಾಡಬಹುದು. ಇಲ್ಲದಿದ್ದರೆ ಹೇಗೆ ಮಾಡುವುದು ?

ಶ್ರೀ ಡಿ. ಎಂ. ಗೋವಿಂದರಾಜು ಅವರು.—ದೇವಸ್ಥಾನಕ್ಕೆ ಧರ್ಮದರ್ಶಿಗಳಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ಡಿ. ಎಂ. ಗೋವಿಂದರಾಜು ಅವರು.—ಆ ದೇವಸ್ಥಾನದ ಹಣ ಎಷ್ಟಿದೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಕೆ. ಪ್ರಭಾಕರ್ ಅವರು.—ಶಿವಗಂಗಾ ದೇವಸ್ಥಾನವು ಮೇಜರ್ ಮುಜರಾಯಿ ದೇವಸ್ಥಾನವಾಗಿರುವುದರಿಂದ ಅದನ್ನು ಸರಿಯಾಗಿ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರದವರು ಕಾರ್ಯಕ್ರಮ ಕೈಕೊಂಡಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೈಕೊಂಡಿದ್ದಾರೆ.

ಶ್ರೀ ಕೆ. ಪ್ರಭಾಕರ್ ಅವರು.—ಅಲ್ಲಿ ಕಾನೂನು ಪ್ರಕಾರ ಕೆಲಸ ಕಾರ್ಯಗಳು ನಡೆಯುತ್ತಿಲ್ಲವಾದ್ದರಿಂದ ಅದನ್ನು ಉತ್ತಮ ಪಡಿಸಬೇಕೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಕಾನೂನು ಪ್ರಕಾರ ನಡೆಯುತ್ತಿದೆಯೆಂದು ವರದಿ ಬಂದಿದೆ.

ಶ್ರೀ ಕೆ. ಪ್ರಭಾಕರ್ ಅವರು.—ಕೂಡಲೆ ಪರಿಶೀಲನೆ ನಡೆಸಿ, ಉತ್ತಮ ಪಡಿಸುವುದಕ್ಕೆ ಸಾಧ್ಯವೆ ?

Mr. SPEAKER.—That is answered already.

ಶ್ರೀ ಎಸ್. ಸಿದ್ದಪ್ಪನವರು (ಮಾಗಡಿ).—ಶಿವಗಂಗಾ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದ್ದೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು.

ಶ್ರೀ ಎಸ್. ಸಿದ್ದಪ್ಪನವರು.—ಯಿಕ್ಕ ಎಲ್ಲ ಮುಜರಾಯಿ ದೇವಸ್ಥಾನಗಳಿಗೂ ನೇಮಕ ಮಾಡುವಹಾಗೆ ಇದಕ್ಕೂ ಮ್ಯಾನೇಜ್‌ಮೆಂಟ್ ಕಮಿಟಿ ಮುಂತಾದ್ದನ್ನು ನೇಮಕ ಮಾಡಬೇಕಾಗಿತ್ತಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಬೇಕಾಗಿಲ್ಲ.

ಶ್ರೀ ಎಸ್. ಸಿದ್ದಪ್ಪನವರು.—ಹಾಗೆ ಮಾಡದೇ ಇರುವುದರಿಂದ ಅನಾನುಕೂಲವಾಗುತ್ತಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಆ ರೀತಿ ದೂರು ಬಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

Medical Aid to Victims of Firing near Dalvay Tank.

Q.—333. Sri B. HUTCHE GOWDA (Turuvekere) :—

Will the Government be pleased to state :—

(*a*) whether it is a fact that there was a firing by the Reserve Police in the Tumkur District near Dalvay Tank in Gubbi Taluk on the raiyats of the surrounding villages ;

(*b*) what the resulting casualty is ;

(*c*) the name of the persons shot dead ; the names of injured persons and their condition at present ;

(*d*) whether any of them were completely disabled ;

(*e*) whether any compensation or relief was given to any person so disabled or to the dependants of the deceased persons ;

(*f*) whether they will place on the table a note on the circumstances that led to the firing incident ?

A.—Sri H. SIDDAVEERAPPA (Minister for Home Affairs and Agriculture).—

(*a*) Yes.

(*b*) Two deaths and four injured.

(*c*) Persons died :—

(1) Narasappa, son of Kondli Narasimhaiah;

(2) Basava, son of Gudadiah, residents of Barasidlahalli.

Persons injured :—

(1) Obaliah,

(2) Gudadiah,

(3) Eramma, and

(4) Obalamma.

All the injured who were in-patients in Thimmanahalli Hospital have been discharged. Their condition is satisfactory. Obalamma is limping.

(*d*) No injured is disabled.

(*e*) The Deputy Commissioner, Tumkur, has reported that the question of grant of lands to the injured and to the dependants of the deceased is being examined.

(*f*) A note is appended below :—

NOTE.

In spite of the Government Order that the water from Dalvay tank should be released to irrigate

(SRI H. SIDDAVEERAPPA).

gardens of Galagekere, the villagers of Singadahalli and Bharasidlahalli objected to the release of water and started causing obstruction to the release of water. So, on 20th March 1952, the Sub-Division Officer, Tiptur, seeing the militant attitude of these villagers and apprehending a breach of the peace asked for Police help in connection with letting out of water to the gardens of Galagekere Village. A batch of Mysore Armed Reserve Police consisting of one Naik and twelve men were accordingly stationed on the tank bund to prevent unauthorised meddling with the water supply and to prevent a breach of the peace. Next day water was let out of the sluice. At about 11-30 P.M. hundreds of persons of Singadahalli and Barasidlahalli, armed with deadly weapons, suddenly attacked the Mysore Armed Reserve Police and the local Police, who were guarding the sluice.

The Sub-Inspector of Police who was in charge of the force, advised the mob to disperse peacefully and to seek redress by constitutional means; but the mob paid no heed to his advice. On the other hand, it assumed a defiant attitude and began to pelt stones at the Police and assaulted them with clubs. The Police resorted to lathi charge to disperse the mob, but it proved futile.

As the mob became unruly and threatened the Police to snatch away their arms, the Police had to open fire in self-defence, apprehending danger to their lives. Thereafter the mob retreated.

ಶ್ರೀ ಬಿ. ಹುಚ್ಚೇಗೌಡರು.—ಸತ್ತುಹೋದವರು ಇಬ್ಬರೋ ಅಥವ ಇನ್ನೂ ಹಾಸ್ತಿ ಜನರೊ ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಬ್ಬರೇ ಎಂದು ಖಡಾಖಂಡಿತವಾಗಿ ಗೊತ್ತಿದೆ.

ಶ್ರೀ ಬಿ. ಹುಚ್ಚೇಗೌಡರು.—ಗಾ ಯ ಗೊ ಂ ಡ ನಾಲ್ಕು ಜನರಲ್ಲಿ ಇಬ್ಬರು ಪೆಂಗಸರೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಹೌದು.

ಶ್ರೀ ಬಿ. ಹುಚ್ಚೇಗೌಡರು.—'Obalamma is limping' ಎಂದು ತಿಳಿಸಲಾಗಿದೆ. ಇದರ ಅರ್ಥವೇನು?

ಶ್ರೀ ಎಚ್. ಸಿದ್ದವೀರಪ್ಪನವರು.—ಕುಂಟುತ್ತಿದ್ದಾರೆ ಎಂದರ್ಥ. ಗಾಯಗೊಂಡವರನ್ನೆಲ್ಲಾ, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಕರೆಯಿಸಿಕೊಂಡು, ಅಲ್ಲಿ ಎಕ್ಸ್‌ರೆ ಪರೀಕ್ಷೆಮಾಡಿ, ಇನ್ನೇನೇನು ಇಲಾಜು ಬೇಕೋ ಎಲ್ಲವನ್ನೂ ಮಾಡುವಂತೆ ಏರ್ಪಾಡುಮಾಡಿದೆ. ಸರ್ಕಾರದ ಖರ್ಚಿನಿಂದರೇ ಎಲ್ಲಾ ಚಿಕಿತ್ಸೆಯನ್ನೂ ಮಾಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಗುಂಡು ಹಾರಿಸಿದಾಗ ರಾತ್ರಿ 12 ಗಂಟೆಯಾಗಿತ್ತೆ ?

ಶ್ರೀ ಎಚ್. ಸಿದ್ದವೀರಪ್ಪನವರು.—11½ ಗಂಟೆಯಾಗಿತ್ತು.

ಶ್ರೀ ಬಿ. ಹುಚ್ಚೇಗೌಡರು.—ಆಗ ಬೆಳದಿಂಗಳು ಇತ್ತೋ ಆಥವಾ ದೀಪವಿತ್ತೊ ?

Sri H. SIDDAVEERAPPA.—One thing Sir, I may submit that the matter is sub-judice.

Sri B. HUTCHE GOWDA.—I am not referring to merits.

Mr. SPEAKER.—Time of occurrence and other details would be matters for consideration of the Court. The Member may put any other supplementary questions.

ಶ್ರೀ ಬಿ. ಹುಚ್ಚೇಗೌಡರು.—ಈಗ ಎಷ್ಟು ಜನರಿಗೆ ಪರಿಹಾರ ಕೊಡಬೇಕೆಂದು ಯೋಚನೆಮಾಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪನವರು.—ಯಾರಾರಿಗೆ ಸರ್ಕಾರದ ದೃಷ್ಟಿಯಿಂದ ಪರಿಹಾರ ದೊರೆಯಬೇಕೆಂಬುದನ್ನು, ಸಹಾನುಭೂತಿಯಿಂದ ವಿಮರ್ಶೆಮಾಡಿದ ಮೇಲೆ ಸಹಾಯ ಕೊಡಬೇಕೆಂದು ತೋರುತ್ತದೆಯೋ ಅವರಿಗೆಲ್ಲಾ ಕೊಡಬೇಕೆಂದು ಮಾಡಿದೆ.

ಶ್ರೀ ಬಿ. ಹುಚ್ಚೇಗೌಡರು.—(ಇ) ಪ್ರಶ್ನೆಗೆ ಉತ್ತರವಾಗಿ ಡೆಪ್ಯುಟಿ ಕಮಿಷನರವರಿಂದ ಈ ವಿಚಾರದಲ್ಲಿ ವರದಿ ಬಂದಿದೆ ಎಂದು ತಿಳಿಸಲಾಗಿದೆ; ಎಷ್ಟು ಜನರಿಗೆ ಪರಿಹಾರ ಕೊಡಬೇಕೆಂದು ವರದಿಮಾಡಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಮುಖ್ಯ ಮಂತ್ರಿಗಳೂ ಆ ಸ್ಥಳಕ್ಕೆ ಹೋಗಿದ್ದಾಗ ಈ ವಿಚಾರದಲ್ಲಿ ಒಂದು ಎಕ್ಷೈರಿ ಆಗಬೇಕೆಂದು ಕೇಳಿದರು. ಸರ್ಕಾರದ ಪರವಾಗಿ ನಾನು ಹೋಗಿ ಗಾಯಗೊಂಡವರನ್ನೂ, ಅಲ್ಲಿನ ಪ್ರಮುಖ ವ್ಯಕ್ತಿಗಳನ್ನೂ, ಶ್ರೀವೀರ ಲಿಂಗದೇವರು ಮುಂತಾದವರನ್ನೂ ಸೇರಿಸಿ ಮೂರು ನಾಲ್ಕು ಗಂಟೆಗಳ ಕಾಲ ತನಿಖೆಮಾಡಿ, ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಹುಚ್ಚೇಗೌಡರು.—ಡೆಪ್ಯುಟಿ ಕಮಿಷನರ ವರದಿಯಲ್ಲಿ ಎಷ್ಟು ಜನರಿಗೆ ಪರಿಹಾರ ಕೊಡಬೇಕೆಂದು ಹೇಳಿದ್ದಾರೆ ?

Mr. SPEAKER.—The Hon'ble Minister says that it is being examined.

ಶ್ರೀ ಬಿ. ಹುಚ್ಚೇಗೌಡರು.—ಜಮಾನನ್ನು ಎಷ್ಟು ಜನರಿಗೆ ಕೊಡಬೇಕೆಂದು ಅವರಿಂದ ಶಿಫಾರಸು ಬಂದಿದೆ?

Sri H. SIDDAVEERAPPA.—The Deputy Commissioner says that fact has been examined under instructions of Government.

Mr. SPEAKER.—The question is: how many persons have been recommended by the Deputy Commissioner?

Sri H. SIDDAVEERAPPA.—Those that have been injured have been recommended.

Mr. SPEAKER.—The Hon'ble Minister is unable to give the number. He wants notice.

9-30 A.M.

ಶ್ರೀ ಎಕ್. ಗೋಪಾಲಗೌಡರು (ಸಾಗರ–ಹೊಸನಗರ).—ಆ ದಳವಾಯಿ ಕೆರೆಯನ್ನು ಕಟ್ಟಿಸಲು ಯಾರು ಧನ ಸಹಾಯ ಮಾಡಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಸರ್ಕಾರದವರು ಆ ಕೆರೆಯನ್ನು ಕಟ್ಟಿಸಿದ್ದಾರೆ.

ಶ್ರೀ ಟಿ. ಎಕ್. ಮೂಡ್ಲಗಿರಿಗೌಡರು (ಕುಣಿಗಲು).—ಆ ಸ್ಥಳಕ್ಕೆ ಆರಂಡ್ ರಿಜರ್ವ್ ಪೋಲೀಸನ್ನು ಕಳುಹಿಸಿದವರು ಯಾರು ?

Sri H. SIDDAVEERAPPA.—Under orders of the District Magistrate the reserve police was sent there.

ಶ್ರೀ ಟಿ. ಎಕ್. ಮೂಡ್ಲಗಿರಿಗೌಡರು.—ಹೀಗೆ, ನೀರನ್ನು ವ್ಯವಸ್ಥೆಮಾಡತಕ್ಕ ಎಲ್ಲ ಸಂದರ್ಭಗಳಲ್ಲೂ ರಿಜರ್ವ್ ಪೋಲೀಸನ್ನು ಕಳುಹಿಸಲಾಗುತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಎಲ್ಲಾ ಸಂದರ್ಭಗಳಲ್ಲೂ ಕಳುಹಿಸಲಾಗುವುದಿಲ್ಲ. ಹಾಗೆ ಕಳುಹಿಸಬೇಕಾದ ಸಂದರ್ಭ ಬಂದರೇನೆ ಕಳುಹಿಸುವುದು.

Working of the Government Silk Reeling Factory.

Q.—491. **Sri G. PAPANNA** (Sidlaghatta-Chikballapur).—

Will the Government be pleased to state:—

(*a*) the annual profit or loss since the inception of the Government Silk Reeling Factory at Kankanahalli;

(*b*) the manufacturing cost per pound of silk manufactured in this factory;

(*c*) whether this cost of manufacture has been compared with the cost in other filature factories?

A.—**Sri H. SIDDAVEERAPPA** (Minister for Home Affairs and Agriculture).—

(*a*)

Year	*Profit*	*Loss*
	Rs.	Rs.
1945-46 (10½ months).	1,83,804	...
1946-47 ...	36,093	...
1947-48 ...	25,024	...
1948-49 ...	19,035	...
1949-50 ...	31,616	...
1950-51 ...	...	1,05,779

(*b*)

Year	Cost of raw material	Cost of manufacture	Cost of manufacture including depreciation	Total cost of production
	Rs. a. p.	Rs. a. p.	Rs. a. p.	Rs. a. p.
1945-46	41 6 0	8 4 0	8 14 0	50 4 0
1946-47	29 6 0	7 14 0	8 7 0	37 13 0
1947-48	21 2 0	8 0 8	8 10 0	29 12 0
1948-49	24 4 7	7 12 9	8 4 5	32 9 0
1949-50	36 3 4	9 5 4	10 0 8	46 4 0
1950-51	40 0 4	10 10 1	11 7 8	51 8 0

(Closed the Factory for 2 months.)

(*c*) Yes.

ಶ್ರೀ ಪಿ. ಪಾಪಣ್ಣನವರು.—ಮೊನ್ನೆಯ ದಿವಸ ಸರ್ಕಾರಿ ಆಡಳಿತದಲ್ಲರುವ ಎಷ್ಟು ಫ್ಯಾಕ್ಟರಿಗಳು ರಾಭದಾಯಕವಾಗಿ ಕೆಲಸಮಾಡುತ್ತಿಲ್ಲವೆಂದು ಕೇಳಿದ್ದ ಪ್ರಶ್ನೆಗೆ ಉತ್ತರವಾಗಿ, ಹಾಸನ ಜಿಲ್ಲೆಯಲ್ಲರತಕ್ಕ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಒಂದು ಮಾತ್ರ ಎಂದು ತಿಳಿಸಿದ್ದು—ಈ ದಿವಸ ಮತ್ತೆ ಕಾರ್ಖಾನಹಳ್ಳಿಯಲ್ಲರತಕ್ಕ ಸಿಲ್ಕು ಫ್ಯಾಕ್ಟರಿಯನ್ನು ಮುಚ್ಚಲಾಗಿರುತ್ತೆಂದು ತಿಳಿಸಲಾಗಿದೆ. ಈ ವ್ಯತ್ಯಾಸಕ್ಕೆ ಕಾರಣವೇನು?

Sri H. SIDDAVEERAPPA.—I am not able to follow the context to which the Hon'ble Member refers.

Mr. SPEAKER.—Please repeat the question.

ಶ್ರೀ ಪಿ. ಪಾಪಣ್ಣನವರು.—ಮೊನ್ನೆಯ ದಿವಸ ಸರ್ಕಾರಿ ಆಡಳಿತದಲ್ಲರತಕ್ಕ ಕಾರ್ಖಾನೆಗಳಲ್ಲಿ ಯಾವು ಯಾವುದರಲ್ಲಿ ನಷ್ಟವಾಗುತ್ತಿದೆಯೆಂದು ಕೇಳಿರುವುದಕ್ಕೆ ಹಾಸನ ಜಿಲ್ಲೆಯಲ್ಲರತಕ್ಕ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಒಂದು ಮಾತ್ರ ಎಂದು ತಿಳಿಸಿದ್ದರು. ಆದರೆ ಈ ದಿವಸ ನನ್ನ ಪ್ರಶ್ನೆಗೆ ಒದಗಿಸಿರುವ ಉತ್ತರದಲ್ಲಿ ಕಾರ್ಖಾನಹಳ್ಳಿಯಲ್ಲಿ ಫಿಲೇಚರ್ ಫ್ಯಾಕ್ಟರಿಯಲ್ಲಿ 1,05,779 ರೂ. ಗಳು ನಷ್ಟವಾಗಿಪೆಯೆಂದೂ, ಅದನ್ನು ಮುಚ್ಚಲಾಗಿದೆಯೆಂದೂ ತಿಳಿಸಲಾಗಿದೆ. ಹಾಗೆ ಆ ದಿವಸವೇ ಇದನ್ನು ತಿಳಿಸದೆ ಇರಲು ಕಾರಣವೇನು?

Sri H. SIDDAVEERAPPA.—Perhaps that may refer to the iron factory, but I am not able to follow the context